**ದಿನಾಂಕ 21.08.2010 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 237, 2ನೇ ಮಹಡಿ ವಿಧಾನ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 10ನೇ ಆಡಳಿತ ಮಂಡಳಿ ಸಭೆಯ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

| | | |
|---|---|---|
| 1. ಶ್ರೀ ರಾಮಚಂದ್ರಗೌಡರು<br>ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ, ಬೆಂಗಳೂರು. | – | ಅಧ್ಯಕ್ಷರು |
| 2. ಶ್ರೀ ಐ.ಎಂ. ವಿಠ್ಠಲ್ ಮೂರ್ತಿ<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),<br>ಬೆಂಗಳೂರು. | – | ಉಪಾಧ್ಯಕ್ಷರು |
| 3. ಶ್ರೀ ಭೀಮಪ್ಪ<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),<br>ವಿಕಾಸ ಸೌಧ, ಬೆಂಗಳೂರು. | – | ಸದಸ್ಯರು |
| 4. ಡಾ. ಎ. ಆರ್. ಅರುಣಾ<br>ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು. | – | ಸದಸ್ಯರು. |
| 5. ಡಾ. ಎಸ್. ಡಿ. ಮಂಡೋಲ್ಕರ್<br>ವೈದ್ಯಕೀಯ ಅಧೀಕ್ಷಕರು, ಭೋಧಕ ಆಸ್ಪತ್ರೆ, ರಾಯಚೂರು. | – | ಸದಸ್ಯರು |
| 6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,<br>ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,<br>ವಿಶೇಷ ಉಪ ವಿಭಾಗ, ರಾಯಚೂರು. | – | ವಿಶೇಷ ಆಹ್ವಾನಿತರು |
| 7. ಡಾ. ರಾಮಯ್ಯ<br>ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ<br>ರಾಯಚೂರು. | – | ಸದಸ್ಯ ಕಾರ್ಯದರ್ಶಿ |

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರಾಮಚಂದ್ರಗೌಡರುವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಸಭೆಯಲ್ಲಿ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.**

**ವಿಷಯ ಸೂಚಿ ಸಂಖ್ಯೆ. 1 : ಹಿಂದಿನ ಸಭಾ ನಡುವಳಿಗಳನ್ನು ಓದಿ ದಾಖಲಿಸುವುದು ಮತ್ತು ಅನುಪಾಲನ ವರದಿಯನ್ನು ಅನುಮೋದಿಸುವುದು.**

ದಿನಾಂಕ 04.08.2009ರಂದು ಜರುಗಿದ 9ನೇ ಆಡಳಿತ ಮಂಡಳಿಯ ಸಭಾ ನಡುವಳಿಗಳನ್ನು ಓದಿ ದಾಖಲಿಸಿ ಮತ್ತು ಅನುಪಾಲನ ವರದಿಯನ್ನು ಈ ಕೆಳಕಂಡ ಅಂಶಗಳೊಂದಿಗೆ ಆಡಳಿತ ಮಂಡಳಿಯು ಅನುಮೋದಿಸಲಾಯಿತು.

1) ಕ್ರಮ ಸಂಖ್ಯೆ. 8ರಲ್ಲಿ ಮತ್ತು ಇನ್ನಿತರ ವಿಷಯಗಳಲ್ಲಿ ವಿವಿಧ ಬೋಧಕೇತರ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದು, ನೇಮಕಾತಿ ಮಾಡಿಕೊಳ್ಳುತ್ತಿರುವ ಹುದ್ದೆಗಳಿಗೆ ಸಂಬಂಧಿಸಿದ ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆಯಲು ಪ್ರಸ್ತಾವನೆಯನ್ನು ಸರ್ಕಾರದ ಮುಖಾಂತರ ಸಲ್ಲಿಸಲು ಸೂಚಿಸಲಾಯಿತು.

2) ವಿಷಯ ಸಂಖ್ಯೆ. 14ರಲ್ಲಿ ಖಾಯಂ ಪೂರ್ವ ಸೇವಾವಧಿಗೆ ಸಂಬಂಧಿಸಿದಂತೆ, ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 45 ವರ್ಷಕ್ಕೂ ಮೇಲ್ಪಟ್ಟ ನೌಕರರಿಗೆ ಇಲಾಖಾ ಪರೀಕ್ಷೆಗಳಿಂದ ವಿನಾಯಿತಿ ಇದ್ದು ಅದರಂತೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

3) ಕ್ರಮ ಸಂಖ್ಯೆ. 5ರಲ್ಲಿ 50 ಸ್ವಚ್ಛತೆ ಮತ್ತು 50 ಭದ್ರತಾ ಸಿಬ್ಬಂದಿಯನ್ನು ನೇಮಿಸಿದ ಕುರಿತು ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 2 : ಭಾರತೀಯ ವೈದ್ಯಕೀಯ ಮಂಡಳಿ ಅನುಮೋದನೆಗಾಗಿ ನೇರ ಸಂದರ್ಶನ ಹಾಗು ಆಹ್ವಾನದ ಮುಖಾಂತರ ನೇಮಕಾತಿ ಮಾಡಲಾದ ವಿವಿಧ ಬೋಧಕ ವರ್ಗದ ಸಿಬ್ಬಂದಿ ನೇಮಕಾತಿ ಪಟ್ಟಿ ಅನುಮೋದಿಸುವ ಬಗ್ಗೆ.**

ಭಾರತೀಯ ವೈದ್ಯಕೀಯ ಮಂಡಳಿ ಅನುಮೋದನೆಗಾಗಿ ನೇರ ಸಂದರ್ಶನ ಮತ್ತು ಆಹ್ವಾನದ ಮುಖಾಂತರ ನೇಮಕಾತಿ ಮಾಡಲಾದ ವಿವಿಧ 32 ಬೋಧಕ ವರ್ಗದ ಸಿಬ್ಬಂದಿಯ ಪಟ್ಟಿಯನ್ನು ಈ ಕೆಳಕಂಡತೆ ಆಡಳಿತ ಮಂಡಳಿಯು ಅನುಮೋದಿಸಲಾಯಿತು.

| Sl. No | Designation | No. of posts filled |
|---|---|---|
| 1 | Professor | 4 |
| 2 | Assoc. Professor | 2 |
| 3 | Asst. Professor | 6 |
| 4 | Sr. Residents | 2 |
| 5 | Jr. Residents | 8 |
| 6 | Tutors | 10 |
| | **TOTAL** | **32** |

ಕಿರಿಯ ಸ್ಥಾನಿಕ / ಬೋಧಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ ಶ್ರೇಣಿ ನಿಗದಿ ಪಡಿಸಲು ನಿರ್ದೇಶಕರು ಪ್ರಸ್ತಾಪಿಸಿದಾಗ ಕಿರಿಯ ಸ್ಥಾನಿಕ / ಬೋಧಕ ವೃಂದದವರಿಗೆ ವೇತನ ಶ್ರೇಣಿ ನಿಗದಿಪಡಿಸುವ ಕುರಿತು ನಿಗದಿಪಡಿಸಬೇಕಾದ ವೇತನ ಶ್ರೇಣಿಯನ್ನು ಧೃಡಿಕರಿಸಿಕೊಂಡು ಖರ್ಚು ವೆಚ್ಚದ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 3 : ಡಾ. ಶಿವಾನಂದ್. ಕೆ.ಜಿ, ಸಹಾಯಕ ಪ್ರಾಧ್ಯಾಪಕರು, ಶರೀರ ಕ್ರಿಯಾ ಶಾಸ್ತ್ರ ವಿಭಾಗ ಇವರಿಗೆ ಸಹ ಪ್ರಾಧ್ಯಾಕರಾಗಿ ಪದೋನ್ನತಿ ನೀಡಿದ ಕುರಿತು ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ.**

ಡಾ. ಶಿವಾನಂದ್. ಕೆ.ಜಿ, ಸಹಾಯಕ ಪ್ರಾಧ್ಯಾಪಕರು, ಶರೀರ ಕ್ರಿಯಾ ಶಾಸ್ತ್ರ ವಿಭಾಗ ಈ ಹಿಂದೆ ಕಿಮ್ಸ್, ಹುಬ್ಬಳ್ಳಿಯಲ್ಲಿ ನೇಮಕಾತಿ ಹೊಂದಿದ್ದು, ಸದರಿ ವೈದ್ಯರು ರಿಮ್ಸ್ ಸಂಸ್ಥೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಭಾರತೀಯ ವೈದ್ಯಕೀಯ ಮಂಡಳಿ ಅನುಮೋದನೆಗಾಗಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಿದ ಕುರಿತು ಪರಿಶೀಲಿಸಲಾಯಿತು. ಚರ್ಚೆಯ ನಂತರ ಸದರಿ ವೈದ್ಯರು ರಿಮ್ಸ್ ಸಂಸ್ಥೆಯಲ್ಲಿ ವಿಲಿನಗೊಳ್ಳಲು ಇಚ್ಚಿಸಿದಲ್ಲಿ ಅವರಿಂದ ಧೃಡಿಕರಣ ಪತ್ರ ಪಡದು ಪದೋನ್ನತಿ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಮರು ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 4 : ದಿನಾಂಕ 28.07.2010ರಂದು ನೆಡೆದ ರಿಮ್ಸ್ ಸಂಸ್ಥೆಯ 4ನೇ ಆರ್ಥಿಕ ಸಮಿತಿ ಸಭೆಯ ನಡುವಳಿಗಳನ್ನು ಅನುಮೋದಿಸುವ ಬಗ್ಗೆ.**

ದಿನಾಂಕ 28.07.2010ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 118, ವಿಕಾಸ ಸೌಧ, ಬೆಂಗಳೂರಿನಲ್ಲಿ ನೆಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 4ನೇ ಹಣಕಾಸು ಸಮಿತಿ ಸಭೆಯ ನಡುವಳಿಗಳನ್ನು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 5 : ರಿಮ್ಸ್ ಸಂಸ್ಥೆಗೆ ಕಾನೂನು ಸಲಹೆಗಾರರನ್ನು ಮುಂದುವರಿಸಲು ಅನುಮತಿ ನೀಡುವ ಬಗ್ಗೆ.**

ರಿಮ್ಸ್ ಸಂಸ್ಥೆಯ ಕಾನೂನು ಸಲಹೆಗಾರರ ತೃಪ್ತಿಕರ ಸೇವೆಯನ್ನು ಪರಿಗಣಿಸಿ ಮುಂದಿನ ಒಂದು ವರ್ಷದ ಅವಧಿಗೆ ಕಾನೂನು ಸಲಹೆಗಾರರನ್ನಾಗಿ ಸೇವೆಯನ್ನು ಮುಂದುವರಿಸಲು ಮತ್ತು ತಿಂಗಳಿಗೆ ರೂ. 7,500/-ಗಳ ಸಂಭಾವನೆಯೊಂದಿಗೆ ಬೇರೆ ಸ್ಥಳಗಳಲ್ಲಿ ಸಂಸ್ಥೆಯ ಪರವಾಗಿ ನ್ಯಾಯಲಯಕ್ಕೆ ಹಾಜರಾದಲ್ಲಿ ನಿಯಮಾನುಸಾರ ನಿಗದಿತ ದರಗಳ ಪ್ರಕಾರ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 6 : ರಿಮ್ಸ್ ಕಾಲೇಜು ಮತ್ತು ಆಸ್ಪತ್ರೆ ಅವರಣದಲ್ಲಿ ಕ್ಷೀರ ಮಳಿಗೆ (ಕೆ.ಎಂ.ಎಫ್) ಸ್ಥಾಪಿಸುವ ಬಗ್ಗೆ**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆ ಮತ್ತು ಕಾಲೇಜು ಅವರಣದಲ್ಲಿ ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ (ಕೆ.ಎಂ.ಎಫ್) ಇವರು ಕ್ಷೀರ ಮಳಿಗೆಯನ್ನು ಸ್ಥಾಪಿಸಲು ಮುಂದಿನ ಆದೇಶದವರಿಗೆ ಆಡಳಿತ ಮಂಡಳಿಯು ಈ ಕೆಳಕಂಡ ಷರತ್ತಿನೊಂದಿಗೆ ಅನುಮೋದಿಸಲಾಯಿತು.

1) ಕ್ಷೀರ ಮಳಿಗೆಯಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮತ್ತು ರೋಗಿಗಳಿಗೆ ಅವಶ್ಯವಿರುವ ಪದಾರ್ಥಗಳನ್ನು ಮಾತ್ರ ಮಾರಟ ಮಾಡುವುದು.

2) ಲೋಕೋಪಯೋಗಿ ಇಲಾಖೆ ನಿಗದಿ ಪಡಿಸುವ ದರಗಳ ಪ್ರಕಾರ ಬಾಡಿಗೆ ನಿಗದಿಪಡಿಸುವುದು.

3) ಕ್ಷೀರ ಮಳಿಗೆಯನ್ನು ಸ್ಥಾಪಿಸಲು ತಗುಲುವ ಯಾವುದೇ ವೆಚ್ಚವನ್ನು ಒಕ್ಕೂಟವೆ ಭರಿಸುವುದು.

**ವಿಷಯ ಸೂಚಿ ಸಂಖ್ಯೆ. 7: ಭಾರತೀಯ ವೈದ್ಯಕೀಯ ಮಂಡಳಿಯ 4ನೇ ಹಂತದ ನವೀಕರಣಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು, ರಸಾಯನಿಕಗಳು, ಪೀಠೋಪಕರಣಗಳು, ವೈದ್ಯಕೀಯ ಪುಸ್ತಕಗಳನ್ನು ನಿಯಮಾನುಸಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮ ಪ್ರಕಾರ ಖರೀದಿಸಲು ಅನುಮತಿ ನೀಡುವ ಬಗ್ಗೆ.**

**ವೈದ್ಯಕೀಯ ಉಪಕರಣ ಮತ್ತು ಸಲಕರಣೆಗಳು :**

ಭಾರತೀಯ ವೈದ್ಯಕೀಯ ಮಂಡಳಿಯ ನಾಲ್ಕನೇ ಹಂತದ ನವೀಕರಣಕ್ಕಾಗಿ ಅವಶ್ಯವಿರುವ ವೈದ್ಯಕೀಯ ಉಪಕರಣಗಳು, ರಸಾಯನಿಕಗಳು, ಪೀಠೋಪಕರಣಗಳನ್ನು ಖರೀದಿಸಲು ಸಲ್ಲಿಸಿರುವ ರೂ. 5,95,93,777/-ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮದ ಪ್ರಕಾರ ಖರೀದಿ ಕ್ರಮ ಕೈಗೊಂಡು ಖರೀದಿ ಸಮಿತಿಯ ಅನುಮೋದನೆಯೊಂದಿಗೆ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಖರೀದಿಸಲು ಸೂಚಿಸಲಾಯಿತು. ಹಾಗೂ ಉಪಕರಣಗಳ ಖರೀದಿ ನಂತರ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಟೆಂಡರ್‌ನಲ್ಲಿ ನೀಡಿರುವ Specification ಪ್ರಕಾರ ಸರಬರಾಜುದಾರರು ಉಪಕರಣಗಳನ್ನು ಸರಬರಾಜು ಮಾಡಿರುವರೇ ಎಂಬ ಬಗ್ಗೆ ಉಪಕರಣದ ಗುಣಮಟ್ಟ ಮತ್ತು ಯುಕ್ತತೆ ಬಗ್ಗೆ ಧೃಡೀಕರಿಸಿಕೊಳ್ಳಲು ಸೂಚಿಸಲಾಯಿತು. ಈ ಬಗ್ಗೆ ನುರಿತ ತಜ್ಞ ವೈದ್ಯರನ್ನು ವಿಶೇಷ ಆಹ್ವಾನಿತರಾಗಿ ನೇಮಿಸಿ ಉಪಕರಣಗಳ ಗುಣಮಟ್ಟ ಹಾಗು ಯುಕ್ತತೆಯ ಬಗ್ಗೆ ಧೃಡಿಕರಿಸಿಕೊಳ್ಳಲು ಸೂಚಿಸಲಾಯಿತು.

**ವೈದ್ಯಕೀಯ ಪುಸ್ತಕ ಮತ್ತು ಜರ್ನಲ್ಸ್‌ಗಳು :**

ವೈದ್ಯಕೀಯ ಪುಸ್ತಕಗಳನ್ನು ಖರೀದಿಸಲು ವಿಭಾಗವಾರು ಸಲ್ಲಿಸಿರುವ ರೂ. 36,12,222/- ಮೊತ್ತದ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸಂಸ್ಥೆಯಲ್ಲಿ ವೈದ್ಯಕೀಯ ಪುಸ್ತಕಗಳ ಪ್ರದರ್ಶನ ನೆರವೇರಿಸಿ ಪ್ರದರ್ಶನದಲ್ಲಿ ಗರಿಷ್ಠ ವಿನಾಯಿತಿ ನೀಡುವ ಪ್ರಕಾಶಕರಿಂದ ಖರೀದಿಸಲು ಅನುಮತಿ ನೀಡಲಾಯಿತು.

ಜರ್ನಲ್ಸ್‌ಗಳನ್ನು ಖರೀದಿಸಲು ವಿಭಾಗವಾರು ಸಲ್ಲಿಸಿರುವ ರೂ. 20,17,849/-ಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ವಿವಿಧ ಜರ್ನಲ್ಸ್ ಸರಬರಾಜುದಾರರಿಂದ ರಿನಿವಲ್ (Renewal) ಮಾಡಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

ವೈದ್ಯಕೀಯ ವಿದ್ಯಾಲಯಗಳು / ಸಂಸ್ಥೆಗಳಲ್ಲಿ ನುರಿತ ಮತ್ತು ಸೇವಾ ಮನೋಭಾವವುಳ್ಳ ವೈದ್ಯರನ್ನು ಸಮಾಜಕ್ಕೆ ನೀಡುವ ಸಂಸ್ಥೆಗಳಾಗಿರುವುದರಿಂದ ಜ್ಞಾನಾರ್ಜನೆಗಾಗಿ ಹೆಚ್ಚಿನ ಮಹತ್ವ ನೀಡಬೇಕಾಗಿರುವ ಕಾರಣ ಅವಶ್ಯ ಪುಸ್ತಕಗಳನ್ನು ಖರೀದಿಸಲು ಹೆಚ್ಚಿನ ಅನುದಾನವನ್ನು ನಿಗದಿಪಡಿಸಲು ಸೂಚಿಸಲಾಯಿತು.

ವೈದ್ಯಕೀಯ ಪುಸ್ತಕ & ಜರ್ನಲ್ಸ್‌ಗಳ ಖರೀದಿಗೆ ಸಂಬಂಧೀಸಿದಂತೆ, ಸರ್ಕಾರಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಅಧಿನಿಯಮದ ಪ್ರಕಾರ ವಿನಾಯಿತಿ ನೀಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು.

| Sl. No. | Departments | Equipments | Furnitures | Chemicals & Glasswares | Medical Books & Journals | Total Amount |
|---|---|---|---|---|---|---|
| 1 | Dept. of Anatomy | 645000 | 324500 | 315204 | 250525 | 1535229 |
| 2 | Dept. of Physiology | 735000 | 245875 | 368751 | 275240 | 1624866 |
| 3 | Dept. of Biochemistry | 925340 | 180452 | 548523 | 250450 | 1904765 |
| 4 | Dept. of Pathology | 1125445 | 254875 | 675825 | 165245 | 2221390 |
| 5 | Dept. of Microbiology | 636755 | 245785 | 452650 | 245000 | 1580190 |
| 6 | Dept. of Pharmacology | 525365 | 145250 | 345000 | 245000 | 1260615 |
| 7 | Dept. of Forensic Medicine | 425485 | 175000 | 145000 | 200500 | 945985 |
| 8 | Dept. of Community Medicine | 854000 | 547855 | 236500 | 245000 | 1883355 |
| 9 | Dept. of General Medicine | 8800450 | 675045 | 145000 | 445000 | 10065495 |
| 10 | Dept. of General Surgery | 3998050 | 575800 | 245800 | 415000 | 5234650 |
| 11 | Dept. of Pediatrics | 2050400 | 347000 | 247000 | 357000 | 3001400 |
| 12 | Dept. of Psychiatry | 975050 | 213000 | 80000 | 235000 | 1503050 |
| 13 | Dept. of Skin & VD | 1245700 | 135000 | 57000 | 275000 | 1712700 |
| 14 | Dept. of Orthopedics | 2745000 | 345800 | 37000 | 215000 | 3342800 |
| 15 | Dept. of Anesthesia | 3630000 | 345000 | 545000 | 345111 | 4865111 |
| 16 | Dept. of ENT | 1545000 | 315000 | 54000 | 225000 | 2139000 |
| 17 | Dept. of Ophthalmology | 1745000 | 395000 | 64000 | 255000 | 2459000 |
| 18 | Dept. of OBG | 2565000 | 380500 | 75000 | 351000 | 3371500 |
| 19 | Dept. of Dentistry | 1045000 | 265000 | 85000 | 175000 | 1570000 |
| 20 | Dept. of Radiology | 15850000 | 295000 | 55000 | 245000 | 16445000 |
| 21 | Dept. of Chest & TB | 945000 | 175000 | 60000 | 215000 | 1395000 |
| Grand Total | | 53012040 | 6581737 | 4837253 | 5630071 | 70061101 |

**ವಿಷಯ ಸೂಚಿ ಸಂಖ್ಯೆ 8 : ಈ ಸಂಸ್ಥೆಯ ಉತ್ತಮ ಪ್ರಗತಿಗಾಗಿ ಸಂಪನ್ಮೂಲ ನಿರ್ವಹಣಾ ಪದ್ಧತಿ ತಂತ್ರಾಂಶ (Campus Resources Management System Software)ನ್ನು ಅಳವಡಿಸಲು ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000ರನ್ವಯ ಕೈಗೊಂಡ ಕ್ರಮದ ಬಗ್ಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.**

ಸದರಿ ಪ್ರಸ್ತಾವನೆಯನ್ನು ಆಡಳಿತ ಸಮಿತಿಯು ಪರಿಶೀಲಿಸಿ ಸಂಪನ್ಮೂಲ ನಿರ್ವಹಣಾ ಪದ್ಧತಿ ತಂತ್ರಾಂಶ (Campus Resources Management System Software)ನ್ನು ಅಳವಡಿಸಲು ಈ ಪೂರ್ವ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯದೆ ಖರೀದಿ ಪ್ರಕ್ರಿಯೆ ಜರುಗಿಸಿದ್ದು, ಕಾರಣ ಈ ಪ್ರಸ್ತಾವನೆಯನ್ನು ಪೂರ್ಣ ಮಾಹಿತಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು. ಸರ್ಕಾರದಿಂದ ಅನುಮತಿ ದೊರೆಯುವವರೆಗೆ ಸದರೀ ಸಂಸ್ಥೆಗೆ ಯಾವುದೇ ಹಣವನ್ನು ಬಿಡುಗಡೆ ಮಾಡಬಾರದೆಂದು ತೀರ್ಮಾನಿಸಲಾಯ್ತು.

**ವಿಷಯ ಸೂಚಿ ಸಂಖ್ಯೆ 9 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು**

**ಬೋಧಕ ಆಸ್ಪತ್ರೆಯಲ್ಲಿ ಮೊದಲನೆ ಮಹಡಿ ಚಾವಣಿ ಕುಸಿದು ಬಿದ್ದಿರುವ ಕುರಿತು.**

ರಿಮ್ಸ್ ಜಿಲ್ಲಾ ಬೋಧಕ ಆಸ್ಪತ್ರೆಯಲ್ಲಿ ಇತ್ತಿಚೆಗೆ ಬಿದ್ದ ಭಾರಿ ಮಳೆಯಿಂದ ಮೊದಲನೆ ಮಹಡಿ ಚಾವಣಿ ಕುಸಿದು ಬಿದ್ದಿರುವ ಕಾರಣ 4ನೇ ಹಂತದ ನವೀಕರಣಕ್ಕಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಯಾವುದೇ ಸಮಯದಲ್ಲಿ ಭೇಟಿ ನೀಡುವ ಸಾಧ್ಯತೆಯಿರುವುದರಿಂದ 300 ಹಾಸಿಗೆಗಳ ಕೊರತೆಯಿದ್ದು, ಜಿಲ್ಲಾ ಬೋಧಕ ಆಸ್ಪತ್ರೆಯು ವಾಸಿಸಲು ಯೋಗ್ಯವಾಗಿಲ್ಲವೆಂದು ಲೋಕೋಪಯೋಗಿ ಇಲಾಖೆಯವರು ಧೃಡಿಕರಿಸಿದ ಬಗ್ಗೆ ನಿರ್ದೇಶಕರು ಆಡಳಿತ ಮಂಡಳಿಯ ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಈ ಹಾಸಿಗೆಗಳ ಕೊರತೆಯನ್ನು ನಿವಾರಿಸಲು ಹಾಗು ಚಿಕಿತ್ಸೆಗಾಗಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಈ ಕೂಡಲೇ ಉದ್ದೇಶಿತ 520 ಹಾಸಿಗೆಗಳ ಕಟ್ಟಡದ 5 & 6 ನೇ ಅಂತಸ್ತಿನಲ್ಲಿ ಕೊರತೆಯಿರುವ ಹಾಸಿಗೆಗಳನ್ನು ಹೊಂದಿಸಲು ಅನುವು ಮಾಡಿಕೊಂಡು ಇದಕ್ಕೆ ಬೇಕಾಗುವ ಅನುದಾನದ ಬಗ್ಗೆ ಪೂರ್ಣ ಮಾಹಿತಿಯೊಂದಿಗೆ ಸರ್ಕಾರದ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ಉಪ ವಿಭಾಗ, ರಿಮ್ಸ್ ಅವರಣ ರಾಯಚೂರು ಇವರಿಗೆ ಸೂಚಿಸಲಾಯಿತು.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಶ್ರೀ ಐ.ಎಂ. ವಿಠ್ಠಲ್ ಮೂರ್ತಿ) 22/09
ಸರ್ಕಾರದ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಶ್ರೀ ರಾಮಚಂದ್ರಗೌಡ),
ವೈದ್ಯಕೀಯ ಶಿಕ್ಷಣ ಸಚಿವರು, ಕನಾರ್ಟಕ ಸರ್ಕಾರ,
ಹಾಗೂ ಅಧ್ಯಕ್ಷರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.